# ಔರ ಸ್ಕ್ಯಾನರ್

## ನಮ್ಮ ಔರದ ಶಕ್ತಿ ಪರೀಶೀಲನೆ

ದೇಹಕ್ಕೆ ಸರಿಹೊಂದುವ ಸೂಕ್ತ ರತ್ನಗಳ ಪರಿಶೀಲನೆ ದೇಹದ ವಿವಿಧ ಚಕ್ರಗಳ ಶಕ್ತಿಯ ಮಟ್ಟದ ಪರೀಕ್ಷೆ, ಗ್ರಹಗಳ ಪ್ರಭಾವ ನಮ್ಮ ಮೇಲೆ ಎಷ್ಟಿದೆ ತಿಳಿಯಲು ಸಕಾರಾತ್ಮಕ, ನಕಾರಾತ್ಮಕ ಶಕ್ತಿಗಳ ಪರಿಶೀಲನೆ ಸರಿ ಹೊಂದುವ ಮನೆಯ ಆಯ್ಕೆಯ ಪರೀಕ್ಷೆ ಸೂಕ್ತವಾದ ಸಂಗಾತಿಯ ಆಯ್ಕೆ ಫೆಂಗ್ ಶೂಯಿ ತಪಾಸಣೆ, ವಾಸ್ತು ದೋಷಗಳ ಪರಿಶೀಲನೆ, ಜಿಯೋಪತೀಕ್ ಸ್ಪೇಸ್ ಪತ್ತೆ ಹಚ್ಚುವಿಕೆ ದೇಹಕ್ಕೆ ಹೊಂದುವ ಆಹಾರ ಮತ್ತು ಔಷಧಿಗಳ ಆಯ್ಕೆ, ವಿವಿಧ ವಿಕಿರಣಗಳ ಮೇಲೆ ವಿವಿಧ ತರಹದ ಪರೀಶಿಲನೆ. **Black magic, color selection, Gem stone selection, education related, job or business which career is suitable,** ಇನ್ನೂ ಮುಂತಾದವುಗಳನ್ನು ಇದರಿಂದ ಪತ್ತೆ ಹಚ್ಚಬಹುದು.

## ಚಕ್ರ ಮತ್ತು ಔರಾದ ಪರೀಕ್ಷೆ

ನಾವು ಔರಾದ ಸ್ಕ್ಯಾನರ್ ಮುಂದೆ ಒಬ್ಬ ವ್ಯಕ್ತಿಯನ್ನು ಕೂರಿಸಿ ಅದರ ಫ್ಲ್ಯಾಟ್ನಲ್ಲಿ ಒಂದು ಚಕ್ರದ ಸ್ಯಾಂಪಲ್ ಲೋಡ್ ಮಾಡಿ ಹಿಡಿದಾಗ ವ್ಯಕ್ತಿಯಲ್ಲಿನ ಚಕ್ರವು ಎಷ್ಟರ ಮಟ್ಟಿಗೆ ಸಕ್ರೀಯವಾಗಿರುತ್ತದೆಯೋ ಅಷ್ಟನ್ನು ತಾನು ತೆರೆದುಕೊಳ್ಳುವ ಮುಖಾಂತರ ನಮಗೆ ಸೂಚಿಸುತ್ತದೆ, ಇದೇ ರೀತಿಯಲ್ಲಿ ನಾವು ಎಲ್ಲಾ ಚಕ್ರದ ಫಲಿತಾಂಶವನ್ನು ಪಡೆದುಕೊಳ್ಳಬಹುದು.

ನಾವು ಯಾವ ವ್ಯಕ್ತಿಯ ಔರ ಅಥವಾ ಚಕ್ರವನ್ನು ಸ್ಕ್ಯಾನ್ ಮಾಡುವ ಮೊದಲು ಈ ವಿಷಯ (ಔರ ಮತ್ತು ಚಕ್ರದ ಅರಿವನ್ನು ತಿಳಿಸಿಕೊಡುವುದು ಮುಖ್ಯವಾಗಿರುತ್ತದೆ ಆದ್ದರಿಂದ ನಾವು ಔರ ಮತ್ತು ಚಕ್ರದ ಕುರಿತು ಕೆಲ ಸಂಗತಿಗಳನ್ನು ತಿಳಿದುಕೊಳ್ಳೋಣ.

ಈ ಭೂ ಮಂಡಲವು ಇತರೆ ಗ್ರಹಗಳಿಗಿಂತ ಭಿನ್ನವಾಗಿದ್ದು ನೀರು, ಗಾಳಿ ಮತ್ತು ಪಕ್ಷಿ ಪ್ರಾಣಿ ಸಂಕುಲಗಳು ನೆಮ್ಮದಿಯಿಂದ ಜೀವನ ನಡೆಸಲು ಭೂ ಮಂಡಲವನ್ನು ಹೆಚ್ಚು ತಾಪಮಾನ ಏರದಂತೆ ಓಝೋನ್ ಪದರವು ಸೂರ್ಯನಿಂದ ರಕ್ಷಿಸುವಂತೆ ಔರರವೂ ಸಹ ನಮ್ಮ ರಕ್ಷಾ ಕವಚವಾಗಿದೆ.

# ಔರಾ

ನಿಮ್ಮ ಭೌತಿಕ ಶರೀರ ಕೇವಲ ನಿಮ್ಮದೇ ಆದ ಒಂದು ಚಿಕ್ಕ ಭಾಗ ಎನ್ನುವುದು ನಿಜವಾದ ಸಂಗತಿ, ನೀವು ವ್ಯಕ್ತಿಯನ್ನು ನೋಡುತ್ತಿದ್ದೀರಿ ಎಂದರೆ ಆತನ ರಕ್ತ, ಮಾಂಸ , ಮೂಳೆ ಮತ್ತು ಚರ್ಮದಿಂದ ಕೂಡಿದ ಒಂದು ಆಕಾರವನ್ನು ನೋಡುತ್ತಿರುವಿರಿ ಎಂಬುದು ಸತ್ಯ ಅವರ ಚೈತನ್ಯ ವಲಯ ತೇಜೋಮಂಡಲವು ಗಮನಕ್ಕೆ ಬರುವುದಿಲ್ಲ,

ನಮ್ಮ ಭೌತಿಕ ಶರೀರ + ತೇಜೋಮಂಡಲ ಸೇರಿ ನಾವು ಆಗುತ್ತೇವೆ. ಇದು ಬರೀಕಣ್ಣಿಗೆ ಕಾಣದೇ ಇದ್ದರೂ ನಮ್ಮ ಅನುಭವಕ್ಕೆ ಬಂದಿರುತ್ತದೆ, ನಾವು ಮಲಗಿದ್ದಾಗ ಯಾರಾದರೂ ನಮ್ಮ ಹತ್ತಿರ ಸುಳಿದಾಡಿದಾಗ ಅವರು ಯಾರು ಎಂದು ನಮ್ಮ ನಿದ್ರೆಯಲ್ಲಿಯೇ ನಮ್ಮ ಅರಿವಿಗೆ ಬಂದಿರುತ್ತದೆ ಅಲ್ಲವೇ, ಇದಕ್ಕೆ ಕಾರಣ ಅವರ ಔರಾದ ವಲಯವು ನಮ್ಮ ಔರಾದ ಸಂಪರ್ಕಕ್ಕೆ ಬಂದಿದ್ದಾಗಿರುತ್ತದೆ, ಈ ಅನುಭವವು ಸಾಮಾನ್ಯವಾಗಿ ಎಲ್ಲರ ಅರಿವಿಗೂ ಬಂದಿರುತ್ತದೆ, ನಾವು ಕೆಲವು ಮಹತ್ವದ ಅಥವಾ ದೇವತೆಗಳ ಭಾವಚಿತ್ರಗಳನ್ನು ಗಮನಿಸಿದಾಗ ಅವರ ಶಿರಭಾಗದಲ್ಲಿ ಬಿಳಿ ಅಥವಾ ಹೊಂಬಣ್ಣದ ಪ್ರಕಾಶಮಾನವಾದ ಒಂದು ಮಂಡಲವನ್ನು ಗಮನಿಸಿದ್ದೇವೆ ಅಲ್ಲವೇ ಇದನ್ನೇ ಪ್ರಭಾಮಂಡಲ ಪ್ರಭವಲಯ ಹಾಗೂ ಔರಾ ಮಂಡಲವೆAದು ಕರೆಯಲಾಗುತ್ತದೆ, ಸಾಮಾನ್ಯ ಮಾನವರಲ್ಲಿ ಪ್ರಭಾವಲಯವು (ಔರಾವು) 12 ಅಡಿಯಿಂದ ಕನಿಷ್ಠ 4 ಅಡಿಯ ವರೆವಿಗೆ ಇರುತ್ತದೆ,

ಓಝೊನ್ ಪದರವು ಭೂಮಿಯನ್ನು ಅತಿ ನೇರಳೆ ಕಿರಣಗಳನ್ನು ತಡೆದು ಹೆಚ್ಚು ತಾಪವೇರದಂತೆ ರಕ್ಷಿಸಿದ ಹಾಗೇ ನಮ್ಮನ್ನು ನಮ್ಮ ಔರಾವೂ ರಕ್ಷಿಸುತ್ತದೆ, ಇದನ್ನೇ ಸೂಕ್ಷ್ಮ ಶರೀರವೆಂದು ಕರೆಯುತ್ತಾರೆ, ನಮ್ಮ ಭೌತಿಕ ಶರೀರದ ಸುತ್ತಲೂ ಮೊಟ್ಟೆಯಾಕಾರದಲ್ಲಿ ಇದೆ, ಈ ವಲಯದಲ್ಲಿನ ದೋಷದಿಂದಾಗಿ ನಮ್ಮ ದೈಹಿಕ, ಮಾನಸಿಕ ಕಾಯಿಲೆ ಉದ್ಭವವಾಗುತ್ತದೆ. ಈ ತಡೆಗೋಡೆಯೇ ನಮ್ಮನ್ನು ರಕ್ಷಿಸುತ್ತದೆ,

ನಾವು ವಿಶಾಲ ವಿಶ್ವದ ಚೈತನ್ಯದೊಳಗಿನ ಒಂದು ಭಾಗ ಚೈತನ್ಯದ ವಿಷಯಕ್ಕೆ ಬಂದಾಗ ಚೈತನ್ಯ ಎಂಬುದು ಕೇವಲ ಮಾನವನಿಗಷ್ಟೇ ಅಲ್ಲ ಮರ-ಗಿಡ, ಪ್ರಾಣಿ- ಪಕ್ಷಿ ಅಲ್ಲದೇ ನಮ್ಮ ಪ್ರೀತಿಯ ವಸ್ತುಗಳು ಕೂಡ ಹೊಂದಿವೆ, ಇವುಗಳು ಮಾನವನ ಚೈತನ್ಯ ವಲಯಕ್ಕಿಂತ ಭಿನ್ನವಾಗಿರುತ್ತದೆ,